ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 20.11.2024.

**ಮುಖ್ಯ ವಿಚಾರಣೆಃ** ಎದುರುದಾರ ಪರ ಶ್ರೀ ಎ.ಡಬ್ಲ್ಯೂ .ಎ. ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯದಿಂದಾ ಕೂಡಿದ್ದು, ಅದನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿರುತ್ತದೆ ಮತ್ತು ನಾನು ಅದಕ್ಕೆ ಸಹಿ ಮಾಡಿರುತ್ತೇನೆ.

ಆದ್ದರಿಂದ ಅರ್ಜಿದಾರರ ಅರ್ಜಿಯನ್ನು ಖರ್ಚು ಸಮೇತ ವಜಾ ಮಾಡಬೇಕೆಂದು ಮಾನ್ಯ ನ್ಯಾಯಾಲಯಕ್ಕೆ ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ** ಅರ್ಜಿದಾರ ಪರ ಶ್ರೀ ಬಿ.ಎ.ಡಿ. ವಕೀಲರಿಂದಃ

ನಾನು ರಾಮರಾವ್ ರವರ ದತ್ತಕ ಪುತ್ರ ಅಲ್ಲ ಎಂದರೆ ಸರಿಯಲ್ಲ. ರಾಮರಾವ್ ರವರು ನನ್ನನ್ನು ದತ್ತಕ ಪಡೆದಿರುತ್ತಾರೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ, ಸಾಕ್ಷಿ ಫೋಟೋ ಇದೆ ಎಂದು ನುಡಿಯುತ್ತಾರೆ. ದತ್ತಕ ಪಡೆದ ಬಗ್ಗೆ ಯಾವುದೇ ನೋಂದಾಯಿತ ಪತ್ರ ಇಲ್ಲ ಎಂದರೆ, ಸಾಕ್ಷಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ರಾಮರಾವ್ ರವರ ಎಲ್ಲ ಜಮೀನುಗಳು ಸದ್ಯ ನನ್ನ ಹಾಗೂ ಅರ್ಜಿದಾರರ ತಬಾದಲ್ಲಿ (ಕಬ್ಜೆಯಲ್ಲಿ) ಇರುತ್ತದೆ. ಅರ್ಜಿದಾರಳ ಕಬ್ಜೆಯಲ್ಲಿರುವ ಜಮೀನಿನ ಸರ್ವೆ ನಂ.69 ಕಾಮನಳ್ಳಿ ಗ್ರಾಮದ ಜಮೀನು ಅದು 4 ಎಕರೆ ಇರುತ್ತದೆ. ಅದೇ ರೀತಿ ಭೀಮಾಪುರ ಗ್ರಾಮದ ಜಮೀನಿನ ಸರ್ವೆ ನಂ.87 ಇದು 3 ಎಕರೆ ಚಿಲ್ಲರೆ ಗುಂಟೆ ಅರ್ಜಿದಾರಳ ಕಬ್ಜೆಯಲ್ಲಿ ಇರುತ್ತದೆ. ಸದರಿ ಜಮೀನುಗಳ ಪಹಣಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ ಜಮೀನುಗಳ ಪಹಣಿಗಳಲ್ಲಿ ನನ್ನ ಹೆಸರು ಇರುತ್ತದೆ, ಅದರೆ ಅವುಗಳು ಅರ್ಜಿದಾರಳ ತಬಾದಲ್ಲಿ ಇರುತ್ತವೆ.

ಸದರಿ ಜಮೀನುಗಳು ಅರ್ಜಿದಾರಳ ತಬಾದಲ್ಲಿ ಇರುತ್ತವೆ ಎಂದು ಎಲ್ಲಿಯು ಕೂಡಾ ಹೇಳಿಲ್ಲ

ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿಯು ಕೂಡಾ ಸದರಿ ವಿಷಯವನ್ನು ಬರೆದಿಲ್ಲ ಎಂದರೆ ಸರಿ. ನಾನು ಹೇಳಿದಂತೆ 2 ಜಮೀನುಗಳು ಅರ್ಜಿದಾರಳ ಕಬ್ಜೆಯಲ್ಲಿ ಇರುವುದಿಲ್ಲ ಹಾಗೂ ನಾನೇ ಕಬ್ಜೆಯಲ್ಲಿ ಇರುತ್ತೇನೆ ಎಂದರೆ ಸರಿಯಲ್ಲ. ಪಂಡಿತರಾವ್ ಕುಲಕರ್ಣಿ ರವರು ಅರ್ಜಿದಾರರ ತಂದೆಯಾಗಿರುತ್ತಾರೆ. ಪಂಡಿತರಾವ್ ಕುಲಕರ್ಣಿ ರವರ ಹೆಸರಿನಲ್ಲಿರುವ ಜಮೀನುಗಳು ಯಾರ-ಯಾರು ಹೆಸರಿನಲ್ಲಿ ಇವೆ ಮತ್ತು ಎಷ್ಟು-ಎಷ್ಟು ಇವೆ ಎಂದು ನನಗೆ ಗೊತ್ತಿಲ್ಲ. ಸದರಿ ಪಂಡಿತರಾವ್ ಕುಲಕರ್ಣಿ ಹೆಸರಿನಲ್ಲಿರುವ ಜಮೀನು ಯಾವ-ಯಾವ ಊರಿನಲ್ಲಿರ ಇರುತ್ತವೆ ಎಂದರೆ, ಸಾಕ್ಷಿ ಹಿರೋಳಿ, ಕಾಮನಳ್ಳಿ, ಅಂಬೆವಾದ ಗ್ರಾಮ ಮತ್ತು ಚಳಿಗೇರಾ ಗ್ರಾಮದಲ್ಲಿ ಇರುತ್ತವೆ ಎಂದು ನುಡಿಯುತ್ತಾರೆ. ಸದರಿ ಪಹಣಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಹಾಗೂ ಆ ಬಗ್ಗೆ ವಿಚಾರಣೆ ಮಾಡಿಲ್ಲ ಎಂದರೆ ಸರಿ.

ಅರ್ಜಿದಾರಳು ರಾಮರಾವ್ ರವರ ಮದುವೆ ಹೆಂಡತಿ ಎಂದರೆ ಸರಿ. ರಾಮರಾವ್ ರವರಿಂದ ಅರ್ಜಿದಾರಳು ಜೀವನಾಂಶ ಪಡೆಯುತ್ತಿದ್ದಳು ಎಂದರೆ ಸರಿ. ರಾಮರಾವ್ ತಿರಿಕೊಂಡ ನಂತರ ಜೀವನಾಂಶ ಬಂದ್ ಆಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಹೊಲ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ರಾಮರಾವ್ ತಿರಿಕೊಂಡ ನಂತರ ಮೇಲೆ ಹೇಳಿದ ಕಾಮನಳ್ಳಿ ಮತ್ತು ಭೀಮಪುರ ಹೊಲವನ್ನು ಅರ್ಜಿದಾರಳಿಗೆ ಕೊಡಲಾಗಿದೆ. ಅದರ ಬಗ್ಗೆ ಯಾವುದೇ ದಾಖಲೆಯನ್ನು ಅರ್ಜಿದಾರಳಿಗೆ ಬರೆದುಕೊಟ್ಟಿಲ್ಲ. ರಾಮರಾವ್ ತಿರಿಕೊಂಡ ನಂತರ ಮೇಲೆ ಹೇಳಿದ 2 ಜಮೀನುಗಳನ್ನು ಕೊಟ್ಟಿರುತ್ತವೆ ಎಂದು ಹೇಳಿದ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ನಾನು ಹೇಳುವ ಹಾಗೇ ಮೇಲೆ ಹೇಳಿದ 2 ಜಮೀನುಗಳನ್ನು ಅರ್ಜಿದಾರಳಿಗೆ ಕೊಟ್ಟಿರುತ್ತೇವೆ ಎಂದು ಯಾವುದೇ ದಾಖಲೆಗಳು ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ ಹಾಗೂ ಅರ್ಜಿದಾರಳು ಕಬ್ಜೆಯಲ್ಲಿ ಇಲ್ಲ ಎಂದರೆ ಸರಿಯಲ್ಲ.

ಪ್ರಸ್ತುತ ಅರ್ಜಿಗೆ ಸಂಬಂಧಪಟ್ಟಂತೆ ತಹಶಿಲ್ದಾರ ರವರು ವಿಚಾರಣೆ ಮಾಡಲು ಊರಿಗೆ

ಬಂದಿದ್ದರು ಎಂದರೆ ಸರಿ. ಅವರ ಮುಂದೆ ಇಂತಹ ಹೊಲಗಳು ಅರ್ಜಿದಾರಳ ತಬಾದಲ್ಲಿ ಇರುತ್ತವೆ ಎಂದು ನಾನು ಹೇಳಿಕೆ ಕೊಟ್ಟಿಲ್ಲ. ಅರ್ಜಿದಾರಳಿಗೆ ಈ ದಾವೆಯಲ್ಲಿ ಹಿನ್ನಡೆ ಮಾಡುವ ಉದ್ದೇಶದಿಂದ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರಳು ತನ್ನ ಗಂಡ ತಿರಿಕೊಂಡ ನಂತರ ದಿನನಿತ್ಯ ಬದುಕಲು ಸಾಧ್ಯವಾಗುತ್ತಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರಳು ತನ್ನ ತಂದೆ ಆಸ್ತಿಯಲ್ಲಿ ಜಂಟಿ ಕಬ್ಜೆಯಲ್ಲಿ ಇರುವತ್ತಾರೆ ಎಂದು ಸುಳ್ಳು ಹೇಳಿ ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರಳು ಸದರಿ ದಾವೆಗೆ ಭರಿಸಿಬೇಕಾದ ನ್ಯಾಯಾಲಯದ ವೆಚ್ಚವನ್ನು ಕೂಡಾ ನೀಡಲು ಅಸಮರ್ಥಳು ಇರುತ್ತಾಳೆ ಎಂದರೆ ಸರಿಯಲ್ಲ.

ಸರ್ವೆ ನಂ.11, 90 ಮತ್ತು 184 ಜಮೀನುಗಳು ಅರ್ಜಿದಾರಳ ಕಬ್ಜೆಯಲ್ಲಿ ಇಲ್ಲ ಎಂದರೆ ಸರಿ, ಅವು ನನ್ನ ಕಬ್ಜೆಯಲ್ಲಿ ಇರುತ್ತವೆ. ಸದರಿ ಜಮೀನುಗಳು ಅರ್ಜಿದಾರಳಿಗೆ ಸಂಬಂಧ ಇರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಸದರಿ ಮೂರು ಆಸ್ತಿಗಳಲ್ಲಿಯು ಸಹ ಅರ್ಜಿದಾರಳಿಗೆ ಸಂಬಂಧ ಇರುತ್ತವೆ ಎಂದು ಹೇಳಿ ಬರೆಯಿಸಿಲ್ಲ ಎಂದರೆ ಸರಿ. ಅರ್ಜಿದಾರಳಿಗೆ ಅನ್ಯಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 3ನೇ ಎದುರುದಾರ ಪರ ವಕೀಲರಿಂದಃ

(3ನೇ ಎದುರುದಾರ ಪರವಾಗಿ ಪಾಟೀ ಸವಾಲು ಏನು ಇರುವುದಿಲ್ಲ.)

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**